# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 2121 (2466) |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 27 /03/2026 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಪ್ಲಾಟ್ ಫಾರ್ಮ್ ಆಧಾರಿತ ಗಿಗ್ ವರ್ಕರ್ಸ್ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ಕಾಯ್ದೆ, 2025 ಜಾರಿಗೆ ಬಂದ ನಂತರ 2026-2027ಕ್ಕೆ ಹೊಸದಾಗಿ ಸ್ಥಾಪಿಸಲಾದ ಗಿಗ್ ವರ್ಕರ್ಸ್ ವೆಲ್ ಫೇರ್ ಬೋರ್ಡ್‌ಗೆ ಯಾವ ನಿರ್ದಿಷ್ಟ ಬಜೆಟ್ ಹಂಚಿಕೆಯನ್ನು ಮಾಡಲಾಗುತ್ತಿದೆ; | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಗಿಗ್ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ ಸಂಪನ್ಮೂಲ ಕ್ರೋಢೀಕರಿಸಲು Karnataka Platform based Gig Workers (Social Security and Welfare) Act, 2025 ಅನ್ನು **ದಿನಾಂಕ:12-09-2025** ರಂದು ಸರ್ಕಾರವು ಅಧಿಸೂಚಿಸಿರುತ್ತದೆ ಮತ್ತು ಇದಕ್ಕನುಗುಣವಾಗಿ ನಿಯಮಾವಳಿಯನ್ನು **ದಿನಾಂಕ:19-11-2025** ರಂದು ಅಧಿಸೂಚಿಸಲಾಗಿ ಮಂಡಳಿಯನ್ನು ರಚಿಸಲಾಗಿರುತ್ತದೆ.<br><br>ಈ ಕಾಯ್ದೆಯಡಿ ಗಿಗ್ ಕಾರ್ಮಿಕರಿಗೆ ನೀಡುವ ಪ್ರತಿಯೊಂದು ಗಿಗ್ ಕಾರ್ಯದ ಪಾವತಿಗಳ ಮೇಲೆ **ಕನಿಷ್ಠ 1% ರಿಂದ ಗರಿಷ್ಠ 5% ವರೆಗೆ ಕಲ್ಯಾಣ ಶುಲ್ಕವನ್ನು** ವಿಧಿಸುವ ಮೂಲಕ ನಿಧಿ ಸೃಜಿಸಲಾಗುವುದು. ಸದರಿ ನಿಧಿಯಲ್ಲಿ ಸಂಗ್ರಹವಾದ ಅನುದಾನದಿಂದ ಗಿಗ್ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಯೋಜನೆಗಳು ಮತ್ತು ಕಲ್ಯಾಣ ಕ್ರಮಗಳನ್ನು ರೂಪಿಸಿ ಜಾರಿಗೊಳಿಸಲಾಗುವುದು. ಈ ಉದ್ದೇಶಕ್ಕಾಗಿ ಸರ್ಕಾರಕ್ಕೆ ಯಾವುದೇ ಬೇಡಿಕೆ ಸಲ್ಲಿಸಿರುವುದಿಲ್ಲ ಮತ್ತು ಸರ್ಕಾರದಿಂದ ಯಾವುದೇ ಅನುದಾನ ಹಂಚಿಕೆಯಾಗುವುದಿಲ್ಲ. |
| ಆ) | ಡಿಜಿಟಲ್ ಸಂಗ್ರಾಹಕರಿಂದ (ಉಬಾ, ಸ್ವಿಗ್ಗಿ, ಜೊಮಾಟೊ, ಓಲಾ, ಉಬರ್) 1% ರಿಂದ 5% ಗಿಗ್ ವರ್ಕರ್ಸ್ ವೆಲ್ ಫೇರ್ ಶುಲ್ಕವನ್ನು ಸಕಾಲಿಕವಾಗಿ ಸಂಗ್ರಹಿಸುವುದನ್ನು ಖಚಿತಪಡಿಸಿಕೊಳ್ಳಲು ಸರ್ಕಾರ | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಸರ್ಕಾರದ ಅಧಿಸೂಚನೆ ಸಂಖ್ಯೆ: LD 413 LET 2023, ದಿನಾಂಕ: 13.02.2026 ರನ್ವಯ ಪ್ಲಾಟ್‌ಫಾರ್ಮ್ ಅಥವಾ ಅಗ್ರಿಗೇಟರ್ ಗಳು ತಮ್ಮ ಗಿಗ್ ಕಾರ್ಮಿಕರಿಗೆ ನೀಡುವ ಪ್ರತಿಯೊಂದು ಗಿಗ್ ಕಾರ್ಯದ ಪಾವತಿಗಳ |

| | | |
|---|---|---|
| | ಹೇಗೆ ಯೋಜಿಸಿದೆ; ರಾಜ್ಯ ಪೋರ್ಟಲ್ ನಲ್ಲಿ ನೋಂದಾಯಿಸಲಾದ ಒಟ್ಟು ಗಿಗ್ ಕಾರ್ಮಿಕರ ಸಂಖ್ಯೆ ಎಷ್ಟು; | ಮೇಲೆ **ಕನಿಷ್ಠ 1% ರಿಂದ ಗರಿಷ್ಠ 5% ವರೆಗೆ ಕಲ್ಯಾಣ ಶುಲ್ಕವನ್ನು** ನಿಗಧಿಪಡಿಸಿ ಆದೇಶ ಹೊರಡಿಸಿದೆ.<br><br>ಕಾಯ್ದೆಯಡಿ ಅಗ್ರಿಗೇಟರ್‌ಗಳು ಮಂಡಳಿಯು ಅಭಿವೃದ್ಧಿಪಡಿಸಲಿರುವ ತಂತ್ರಾಂಶದಲ್ಲಿ ನೋಂದಣಿ ಮಾಡಿಕೊಳ್ಳುವ ಮೂಲಕ ಗಿಗ್ ಕಾರ್ಮಿಕರ ದತ್ತಾಂಶ ಮತ್ತು ಕಲ್ಯಾಣ ಶುಲ್ಕವನ್ನು ಮಂಡಳಿಗೆ ವರ್ಗಾಯಿಸಬೇಕಿರುತ್ತದೆ.<br><br>ಪ್ರಸ್ತುತ ತಂತ್ರಾಂಶ ಅಭಿವೃದ್ಧಿ ಕಾರ್ಯ ಪ್ರಗತಿಯಲ್ಲಿದ್ದು, ತಂತ್ರಾಂಶ ಕಾರ್ಯಗತಗೊಳಿಸುವ ತನಕ, ಪ್ರತಿ ತ್ರೈಮಾಸಿಕದಲ್ಲೂ ಪ್ರತಿಯೊಂದು ವ್ಯವಹಾರಕ್ಕೆ ಸಂಬಂಧಿಸಿದಂತೆ ತಮ್ಮ ಗಿಗ್ ಕಾರ್ಮಿಕರಿಗೆ ಮಾಡಿರುವ ಪಾವತಿಗಳ ವಿವರಗಳನ್ನು ಅಗ್ರಿಗೇಟರ್ ಅಥವಾ ಪ್ಲಾಟ್ ಫಾರ್ಮ್‌ಗಳಿಗೆ ಸ್ವಯಂ ವರದಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ಈವರೆಗೆ **30,256** ಗಿಗ್ ಕಾರ್ಮಿಕರನ್ನು ಯೋಜನೆಯಡಿ ನೋಂದಾಯಿಸಲಾಗಿದೆ. |
| ಇ) | ಸಣ್ಣ ಸಂಸ್ಥೆಗಳ LWF ಉದ್ಯೋಗ ದಾತರು (ಕಾರ್ಮಿಕ ಕಲ್ಯಾಣ ನಿಧಿ) ಕೊಡುಗೆಗಳಿಗಾಗಿ ಹೊಸ ಕಡ್ಡಾಯ ಡಿಜಿಟಲ್ ಪಾವತಿ ವಿಧಾನಗಳನ್ನು (UPI,NEFT, RTGS) ಅನುಸರಿಸುತ್ತಾರೆ ಎಂದು ಖಚಿತಪಡಿಸಿಕೊಳ್ಳಲು ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ; | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ಯಲ್ಲಿ ಸಣ್ಣ ಸಂಸ್ಥೆಗಳ ಉದ್ಯೋಗದಾತರು LWF (ಕಾರ್ಮಿಕ ಕಲ್ಯಾಣ ನಿಧಿ) ಪಾವತಿಸಲು ಡಿಜಿಟಲ್ ಪಾವತಿ ವಿಧಾನಗಳನ್ನು ಅನುಸರಿಸುತ್ತಿದ್ದು, ಈ ವಹಿವಾಟುಗಳನ್ನು ಮಂಡಳಿಯ ತಂತ್ರಾಂಶದ ಮುಖಾಂತರವೇ ಮಂಡಳಿಯ ಬ್ಯಾಂಕ್ ಖಾತೆಗೆ ಜಮೆ ಆಗುವುದರಿಂದ ವಂತಿಕೆ ಪಾವತಿ ವಿಧಾನವನ್ನು ತಂತ್ರಾಂಶದಲ್ಲಿ Track ಮಾಡುವ ಮೂಲಕ ಖಚಿತ ಪಡಿಸಿಕೊಳ್ಳಲಾಗುತ್ತದೆ. |
| ಈ) | LWF ಕೊಡುಗೆಗಳ ಹೆಚ್ಚಳದೊಂದಿಗೆ (100-200), 2026ರಲ್ಲಿ ಕಾರ್ಮಿಕರಿಗೆ ಯಾವ ಹೊಸ ಹೊಸ ಕಲ್ಯಾಣ ಪ್ರಯೋಜನಗಳನ್ನು (ಶೈಕ್ಷಣಿಕ ನೆರವು, ಮಾತೃ, ವೈದ್ಯಕೀಯ ಪರಿಚಯಿಸಲಾಗುತ್ತಿದೆ? | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ಯಲ್ಲಿ 2026 ರಲ್ಲಿ ಮಂಡಳಿಯಿಂದ ವಂತಿಕೆ ಪಾವತಿಸುವ ಸಂಘಟಿತ ಕಾರ್ಮಿಕರು ಹಾಗೂ ಅವರ ಅವಲಂಬಿತರಿಗೆ ಪ್ರಸ್ತುತ ಶೈಕ್ಷಣಿಕ ಪ್ರೋತ್ಸಾಹ ಧನಸಹಾಯ ಹಾಗೂ ಮಹಿಳಾ ಕಾರ್ಮಿಕಗೆ ಹೆರಿಗೆ ಭತ್ಯೆ ಮತ್ತು ವೈದ್ಯಕೀಯ ನೆರವು ಯೋಜನೆಗಳ ಸೌಲಭ್ಯ ಗಳನ್ನು ನೀಡಲಾಗುತ್ತಿದೆ. |

**ಕಾಇ 166 ಎಲ್‌ಇಟಿ 2026**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**